## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂರವರ ನ್ಯಾಯಾಲಯ,
## ಪೊನ್ನಂಪೇಟೆ.
**ಸಿ.ಸಿ.ನಂ.612/2018**

ಪಿರ್ಯಾದಿ: ಸರ್ಕಾರ, ವಲಯರಣ್ಯಾಧಿಕಾರಿ,
ಕಲ್ಲಹಳ್ಳ,

ವಿರುದ್ಧ

ಆರೋಪಿ: ಆ-1, ಗಣೇಶ ಮತ್ತು ಇತರರು,

## ದೋಷಾರೋಪಣೆ

ಶ್ರೀ ಗಿರಿಗೌಡ ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯಾದ ನಾನು ಆರೋಪಿಯಾದಃ

ಆ-1, ಗಣೇಶ,
ತಂದೆಃ ಬಸವ,
ಪ್ರಾಯಃ 45 ವರ್ಷ,
ವಾಸಃ ನಿಟ್ಟೂರು ಗ್ರಾಮ, ವಡ್ಡರಮಾಡು,
ಕೊಡಗು.

ಆ-2, ಅಪ್ಪಿ,
ತಂದೆಃ ವೆಂಕಟ್ಟ,
ಪ್ರಾಯಃ 45 ವರ್ಷ,
ವಾಸಃ ನಿಟ್ಟೂರು ಗ್ರಾಮ, ವಡ್ಡರಮಾಡು,
ಕೊಡಗು.

ಆ-3, ಶೇಖರ,
ತಂದೆಃ ಗಣಪತಿ,
ಪ್ರಾಯಃ 30 ವರ್ಷ,
ವಾಸಃ ನಿಟ್ಟೂರು ಗ್ರಾಮ, ವಡ್ಡರಮಾಡು,
ಕೊಡಗು.

ನಿಮ್ಮ ಮೇಲೆ ಹೊಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕ 28.10.2015 ರಂದು ಕಲ್ಲಹಳ್ಳ ವನ್ಯಜೀವಿ ವಲಯದ ಕಾರ್ಮಾಡು ಶಾಖೆಯ ಕೇಶವನಕೊಲ್ಲಿ ಮೇಲ್ಭಾಗದ ತೇಗದ ನೆಡತೋಪಿನ ಭಾಗಕ್ಕೆ ಆರೋಪಿತರಾದ ನೀವುಗಳು ಅಕ್ರಮವಾಗಿ ರಾಷ್ಟ್ರೀಯ ಉದ್ಯಾನವನ ಅರಣ್ಯದೊಳಗೆ ಪ್ರವೇಶಿಸುವ ಮೂಲಕ ಕರ್ನಾಟಕ ಅರಣ್ಯ ಕಾಯ್ದೆ 24(ಇ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿತರಾದ ನೀವುಗಳು ರಾಷ್ಟ್ರೀಯ ಉದ್ಯಾನವನಕ್ಕೆ ಅನುಮತಿ ಇಲ್ಲದೆ ಅಕ್ರಮ ಪ್ರವೇಶ ಮಾಡಿದ್ದು ಮತ್ತು ಹತ್ಯಾರುಗಳಿಂದ ರಾಷ್ಟ್ರೀಯ ಉದ್ಯಾನವನದಲ್ಲಿ ಅಕ್ರಮವಾಗಿ ಎರಡು ತೇಗದ ಮರಗಳನ್ನು ಕಡಿತಲೆ ಮಾಡಿ ನಾಟಗಳಾಗಿ ಪರಿವರ್ತಿಸಿ ಅಕ್ಷಮ್ಯ ಅಪರಾಧ ಎಸಗಿರುವ ಮೂಲಕ ಕರ್ನಾಟಕ ಅರಣ್ಯ ಕಾಯ್ದೆ 80 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

Scanned with CamScanner

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿತರಾದ ನೀವುಗಳು ಇತರ ಆರೋಪಿಗಳೊಡನೆ ನಾಟಗಳಾಗಿ ಪರಿವರ್ತಿಸಿರುವ ಮೂಲಕ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 8 ಮತ್ತು 22 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲಕ್ನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿತರಾದ ನೀವುಗಳು ರಾಷ್ಟ್ರೀಯ ಉದ್ಯಾನವನದ ಅರಣ್ಯದೊಳಗೆ ಅಕ್ರಮವಾಗಿ ಪ್ರವೇಶ ಮಾಡಿ ಎರಡು ತೇಗದ ಮರಗಳನ್ನು ಕಡಿದು ನಾಟಗಳಾಗಿ ಪರಿವರ್ತಿಸಿ ವನ್ಯಜೀವಿಗಳ ನೈಜ ಬದುಕಿಗೆ ಕುಂದುಂಟು ಮಾಡಿರುವ ಮೂಲಕ ವನ್ಯಜೀವಿ ಸಂರಕ್ಷಣಾ ಕಾಯಿದೆ 27 ನ್ನು ಉಲ್ಲಂಘಿಸಿ 51 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿತರಾದ ನೀವುಗಳು ಅರಣ್ಯ ಉತ್ಪನ್ನವಾದ ತೇಗದ ಮರಗಳನ್ನು ಅಕ್ರಮವಾಗಿ ಕಡಿದು ನಾಟಾಗಳಾಗಿ ಪರಿವರ್ತಿಸಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ ಸಾಗಾಟ ಮಾಡಲು ಪ್ರಯತ್ನಿಸಿರುವ ಮೂಲಕ ಕರ್ನಾಟಕ ಅರಣ್ಯ ನಿಯಮ 144 ನ್ನು ಉಲ್ಲಂಘಿಸಿ 165 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

16/12/2023

ದಿನಾಂಕ: 16.12.2023.
ಸ್ಥಳ: ಪೊನ್ನಂಪೇಟೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಪೊನ್ನಂಪೇಟೆ.